**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ. 1782/2016**

ಪಿರ್ಯಾದುದಾರರು:- ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:- 1. ರಾಜೇಶ ಬಿನ್ ನಾಗರಾಜು, 30 ವರ್ಷ
ವಾಸ: ಗಂಗಾಪುರ, ನಂದಗುಡಿ ಹೋಬಳಿ, ಹೊಸಕೋಟೆ.
2. ಶಿವರಾಜ ಬಿನ್ ಶ್ರೀರಾಮಪ್ಪ, 38 ವರ್ಷ
ವಾಸ: ಬಿರ್ಜೆನಹಳ್ಳಿ, ಕೈವಾರ ಹೋಬಳಿ, ಚಿಂತಾಮಣಿ.

**ದೋಷಾರೋಪಣೆ**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಗಳಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ:24.01.2016 ರಂದು ಬೆಳಿಗ್ಗೆ 9.30 ಘಂಟೆ ಸಮಯದಲ್ಲಿ, ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಗೇರಹಳ್ಳಿ ಗ್ರಾಮದ ಬಳಿ ಭಾರತ ಸರ್ಕಾರದ ಪವರ್ ಗಿಡ್ ಸಂಸ್ಥೆಯವರು ಹೆವಿ ವಿದ್ಯುತ್ ಲೈನ್ ಎಳೆಯಲು ಕಂಬಗಳನ್ನು ಹಾಕಲು ಸೈಟಿನಲ್ಲಿ ಕೆಲಸ ಮಾಡುತ್ತಿದ್ದು, ಆರೋಪಿಗಳಾದ ನೀವುಗಳು ಚಾ.ಸಾ.1, 2 ಮತ್ತು 4ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿ, ಟವರ್‌ಗಳನ್ನು ಹಾಕದಂತೆ ತಡೆದು, ಕಂಪನಿಯ ವಾಹನ ಟಾಟಾ ಸುಮೋ ವಾಹನದ ಗ್ಲಾಸ್‌ಗಳನ್ನು ಒಡೆದು ಹಾಕಿರುತ್ತೀರಿ. ಆ ಮೂಲಕ ನೀವು ಭಾ.ದಂ.ಸಂ.ಕಲಂ.353ರ ಸಹವಾಚಕ 34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯದಲ್ಲಿ, ಆರೋಪಿಗಳಾದ ನೀವುಗಳು ಚಾ.ಸಾ.1, 2 ಮತ್ತು 4ರವರಿಗೆ ಅವಾಚ್ಯ ಶಬ್ದಗಳಿಂದ ಬಾಯಿಗೆ ಬಂದಂತೆ ಬೈದಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.504ರ ಸಹವಾಚಕ 34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯದಲ್ಲಿ ಆರೋಪಿಗಳಾದ ನೀವುಗಳು ಟವರ್‌ನಲ್ಲಿ ಕೆಲಸ ಮಾಡುತ್ತಿದ್ದ ಚಾ.ಸಾ.3ರವರಿಗೆ ಕಬ್ಬಿಣದ ಅಂಗಲ್‌ನಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾ.ದಂ.ಸಂ.ಕಲಂ.323 ಮತ್ತು 324ರ ಸಹವಾಚಕ 34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>**

**<u>ಸಿ. ಸಿ. ನಂ. 1782/2016</u>**

ಪಿರ್ಯಾದುದಾರರು:- ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:- 1. ರಾಜೇಶ ಬಿನ್ ನಾಗರಾಜು, 30 ವರ್ಷ
ವಾಸ: ಗಂಗಾಪುರ, ನಂದಗುಡಿ ಹೋಬಳಿ, ಹೊಸಕೋಟೆ.
2. ಶಿವರಾಜ ಬಿನ್ ಶ್ರೀರಾಮಪ್ಪ, 38 ವರ್ಷ
ವಾಸ: ಬಿರ್ಜೆನಹಳ್ಳಿ, ಕೈವಾರ ಹೋಬಳಿ, ಚಿಂತಾಮಣಿ.

**<u>ದೋಷಾರೋಪಣೆ</u>**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ:21.09.2019ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**